ಪಕ್ಷದ ಮುಖಂಡರನ್ನು ಕರೆದು ಸಭೆ ಮಾಡಿ ಎಂದು ನಾನು ಹೇಳಿದ್ದೇನೆ. ಈಗ ಸುಮ್ಮನೆ ಗಲಾಟೆ ಮಾಡಿದರೆ ಸಮಸ್ಯೆ ಪರಿಹಾರವಾಗುತ್ತದೆಯೇ? ಪರಿಹಾರವಾಗುವುದಾದರೆ ಮಾಡಿ.

ಡಾ: ಶರಣಪ್ರಕಾಶ್ ರುದ್ರಪ್ಪ ಪಾಟೀಲ್: ಇವತ್ತಿನದಿವಸ ಎಲ್ಲಾ ಕಡೆ ಆಯುರ್ವೇದಿಕ್ ಡಾಕ್ಟರ್‌ಗಳನ್ನು ಹಾಕಿ ಜನರುಗಳನ್ನು ಕೊಲ್ಲಬೇಕೆಂದು ಮಾಡಿದ್ದೀರಾ?

ಶ್ರೀ ಎ.ಎಸ್.ಬಸವರಾಜು: ಮಾನ್ಯ ಅಧ್ಯಕ್ಷರೆ, ಅರಸೀಕೆರೆಯಲ್ಲಿರುವ ಜೆ.ಸಿ. ಆಸ್ಪತ್ರೆಯಲ್ಲಿ 150 ಹಾಸಿಗೆಗಳನ್ನಾಗಿ ಮಾರ್ಪಾಡು ಮಾಡಿ ಎಂದು ಪ್ರಸ್ತಾವನೆ ಕೊಟ್ಟು 15 ವರ್ಷಗಳಾಗಿವೆ. ಆದರೆ, ಇದೂವರೆಗೂ ಮಾಡಿಲ್ಲ. ಸಿಬ್ಬಂದಿ ವರ್ಗ ಹಾಕುವುದಕ್ಕೆ ಇನ್ನೂ ಎಷ್ಟು ವರ್ಷ ಬೇಕು?

ಅಧ್ಯಕ್ಷರು: ಮಾನ್ಯ ಬಸವರಾಜುರವರೆ, ನಿಮ್ಮ ಪ್ರಶ್ನೆ ಮುಗಿದಿದೆ. ಮಾನ್ಯ ಮಂತ್ರಿಗಳು ಎಲ್ಲರನ್ನೂ ಕರೆದು ಈ ವಿಷಯದ ಬಗ್ಗೆ ಚರ್ಚೆ ಮಾಡಿ ಇದಕ್ಕೊಂದು ನೀತಿಯನ್ನು ರೂಪಿಸುತ್ತಾರೆ. ದಯಮಾಡಿ ತಾವು ಕುಳಿತುಕೊಳ್ಳಿ.

ಶ್ರೀ ಎ.ಎಸ್.ಬಸವರಾಜು: ನನ್ನ ಕ್ಷೇತ್ರದಲ್ಲಿ ನಾಲ್ಕು ಆಸ್ಪತ್ರೆಗಳಿವೆ. ಇವುಗಳನ್ನು ಮೇಲ್ದರ್ಜೆಗೇರಿಸಬೇಕೆಂದು ಮೂರು ವರ್ಷಗಳಿಂದ ಕೇಳುತ್ತಿದ್ದೇವೆ. ಆದರೆ, ಇನ್ನೂ ಮಾಡಿಲ್ಲ. ದಯವಿಟ್ಟು ಅದನ್ನು ಮಾಡಿಕೊಡುವುದಕ್ಕೆ ಹೇಳಿ.

ಅಧ್ಯಕ್ಷರು: ಎಲ್ಲದಕ್ಕೂ ಅಸ್ತು ಎಂದು ಹೇಳಿಬಿಡಿ ಹೋಗಲಿ. ಆಗಲಾದರೂ ಸಮಾಧಾನವಾಗುತ್ತಾರೆ. ವಿಷಯವಂತೂ ಮುಕ್ತಾಯ-ವಾಗುವುದಿಲ್ಲ. ಮುಂದಿನ ಪ್ರಶ್ನೆ ಮಾನ್ಯ ಬಸವರಾಜ ರಾಯರೆಡ್ಡಿಯವರದು. ಅವರು ಬಂದಿಲ್ಲ. ಈಗ ಮುಂದಿನ ಪ್ರಶ್ನೆ ಮಾನ್ಯ ಸಿದ್ದು ಸಾವದಿ ಅವರದು.

ತಾಲ್ಲೂಕ ಮಟ್ಟದ ಎಲ್ಲಾ ಆಸ್ಪತ್ರೆಗಳಿಗೆ ಸಿಬ್ಬಂದಿಗಳನ್ನು ಒದಗಿಸುವ ಕುರಿತು

36 (140) ಶ್ರೀ ಸಿದ್ದು ಸಾವದಿ (ಜಮಖಂಡಿ) ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗೆ ಉತ್ತರಿಸುವರೆ ?

ಅ) ಜಮಖಂಡಿ ತಾಲ್ಲೂಕಿನಲ್ಲಿರುವ ಪ್ರಾಥಮಿಕ ಚಿಕಿತ್ಸಾ ಕೇಂದ್ರ ಹಾಗೂ ಇತರೆ ಆಸ್ಪತ್ರೆಗಳ ಸಂಖ್ಯೆ ಎಷ್ಟು; (ಸಂಪೂರ್ಣ ವಿವರ ಒದಗಿಸುವುದು);

ಆ) ಈ ಎಲ್ಲಾ ಚಿಕಿತ್ಸಾ ಕೇಂದ್ರಗಳಲ್ಲಿರುವ ಸಿಬ್ಬಂದಿಗಳ ಕೊರತೆ ಎಷ್ಟು;

ಇ) ಅದನ್ನು ಯಾವಾಗ ಪೂರೈಸಲಾಗುವುದು ;

ಈ) ಇಲಾಖೆಗೆ ಸಂಬಂಧಿಸಿದ ಸಿಬ್ಬಂದಿ ಆಯಾಕೇಂದ್ರ ಸ್ಥಾನದಲ್ಲಿ ಇರುವಂತೆ ಮಾಡಲು ನಿಯಮಾವಳಿಗಳಿವೆಯೇ ;

ಉ) ಇದ್ದಲ್ಲಿ ಅವುಗಳು ಜಾರಿಯಲ್ಲಿವೆಯೇ ;

ಊ) ಚಿಕಿತ್ಸಾ ಕೇಂದ್ರಗಳಲ್ಲಿ ಯಾವ ವೈದ್ಯರು ಯಾವ ಯಾವ ಚಕಿತ್ಸೆಗಳನ್ನು ನೀಡಬಹುದು ?

ಶ್ರೀ ಆರ್. ಅಶೋಕ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಅ) ಒಂದು ತಾಲ್ಲೂಕು ಆಸ್ಪತ್ರೆ ಒಂದು ಸಮುದಾಯ ಆರೋಗ್ಯ ಕೇಂದ್ರ ಹಾಗೂ 7 ಪ್ರಾಥಮಿಕ ಆರೋಗ್ಯ ಕೇಂದ್ರಗಳು, ಒಂದು ರಾಷ್ಟ್ರೀಯ ಕುಷ್ಠರೋಗ ನಿಯಂತ್ರಣ ಕೇಂದ್ರದ ಆಸ್ಪತ್ರೆ ಜಮಖಂಡಿ ತಾಲ್ಲೂಕಿನಲ್ಲಿದೆ.

ತಾ. ಆಸ್ಪತ್ರೆ	ಜಮಖಂಡಿ	100 ಹಾಸಿಗೆ
ಸ.ಅ. ಕೇಂದ್ರ	ರಬಕವಿ ಬನಹಟ್ಟಿ	30 ಹಾಸಿಗೆ
ಪ್ರಾ.ಆ. ಕೇಂದ್ರ	ಗೋಡೆ	6 ಹಾಸಿಗೆ
	ಹಿಪ್ಪರಗಿ	6 ಹಾಸಿಗೆ
	ಚಿಮ್ಮಡ	6 ಹಾಸಿಗೆ
	ಕೊಣ್ಣೂರು	6 ಹಾಸಿಗೆ
	ಲಿಂಗನೂರು	6 ಹಾಸಿಗೆ
	ಸಾವಳಗಿ	6 ಹಾಸಿಗೆ
	ತೇರದಾಳ	6 ಹಾಸಿಗೆ
ಎನ್.ಎಲ್.ಸಿ.ಸಿ.	ಜಮಖಂಡಿ	

ಆ) ಈ ಎಲ್ಲಾ ಚಿಕಿತ್ಸಾ ಕೇಂದ್ರಗಳಲ್ಲಿರುವ ಸಿಬ್ಬಂದಿಗಳ ಕೊರತೆ 45

ಇ) ವಿಶೇಷ ನೇರ ನೇಮಕಾತಿ ಸಮಿತಿಯಿಂದ 500 ವೈದ್ಯಾಧಿಕಾರಿಗಳನ್ನು ಎರಡು ಹಂತಗಳಲ್ಲಿ ಭರ್ತಿ ಮಾಡಲು ಅನುಮತಿ ನೀಡಿದ್ದು, ಇದರಲ್ಲಿ ಮೊದಲ ಹಂತವಾಗಿ 250 ವೈದ್ಯರ ಹುದ್ದೆಗಳನ್ನು ಭರ್ತಿ ಮಾಡಲು ಅಂತಿಮ ಹಂತದಲ್ಲಿದ್ದು ಆಯ್ಕೆ ಪಟ್ಟಿ ಪ್ರಕಟಿಸಿದ ನಂತರ ಎರಡನೇ ಹಂತದಲ್ಲಿ 250 ಹುದ್ದೆಗಳನ್ನು ಭರ್ತಿ ಮಾಡಲು ಕ್ರಮ ತೆಗೆದುಕೊಳ್ಳಲಾಗುವುದು.

2807 ಅರೆ ವೈದ್ಯಕೀಯ ಸಿಬ್ಬಂದಿಗಳನ್ನು ಭರ್ತಿ ಮಾಡುವ ಸಲುವಾಗಿ ವಿಶೇಷ ನೇರ ನೇಮಕಾತಿ ಸಮಿತಿ ಮುಖಾಂತರ ಅರ್ಜಿ ಆಹ್ವಾನಿಸಲಾಗಿದ್ದು ನೇಮಕಾತಿ ಪ್ರಕ್ರಿಯೆ ಚಾಲನೆಯಲ್ಲಿದೆ. ಪ್ರಕ್ರಿಯೆ ಪೂರ್ಣಗೊಂಡ ನಂತರ ಖಾಲಿ ಹುದ್ದೆಗಳನ್ನು ಆದ್ಯತೆ ಮೇರೆಗೆ ತುಂಬಲಾಗುವುದು. ಇದಲ್ಲದೇ ಗುತ್ತಿಗೆ ಆಧಾರದ ಮೇರೆಗೆ ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿಗಳನ್ನು ನೇಮಕ ಮಾಡಿಕೊಳ್ಳಲು ಜಿಲ್ಲಾಧಿಕಾರಿಗಳಿಗೆ ಅಧಿಕಾರ ನೀಡಲಾಗಿದೆ.

ಈ) ಹೌದು.

ಉ) ಜಾರಿಯಲ್ಲಿದೆ.

ಊ) ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿಗಳ ಎಲ್ಲಾ ಪ್ರಾಥಮಿಕ ಚಿಕಿತ್ಸೆಗಳನ್ನು ನೀಡುತ್ತಾರೆ.

ಸಾರ್ವಜನಿಕ ಆಸ್ಪತ್ರೆ ಸಮುದಾಯ ಆರೋಗ್ಯ ಕೇಂದ್ರದ ಹಾಸಿಗೆಗಳ ಆಸ್ಪತ್ರೆಗಳಲ್ಲಿ ತಜ್ಞತೆಗೆ ತಕ್ಕಂತೆ ತಜ್ಞರು ಚಿಕಿತ್ಸೆ ನೀಡುತ್ತಾರೆ.

ಶ್ರೀ ಸಿದ್ದು ಸಾವದಿ: ಮಾನ್ಯ ಅಧ್ಯಕ್ಷರೆ, ನಮ್ಮ ಜಮಖಂಡಿ ವಿಧಾನ ಸಭಾ ಕ್ಷೇತ್ರ ಸುಮಾರು ನಾಲ್ಕು ಲಕ್ಷ ಜನಸಂಖ್ಯೆಯನ್ನು ಹೊಂದಿದ್ದು, ಮೂರು ದೊಡ್ಡ ಪಟ್ಟಣಗಳನ್ನು ಸಹ ಹೊಂದಿದೆ. ಆದರೆ, ಅಲ್ಲಿ ಬೆರಳಿಣಿಕೆಯಷ್ಟು ಪ್ರಾಥಮಿಕ ಆರೋಗ್ಯ ಕೇಂದ್ರ ಮತ್ತು ಜನರಲ್ ಆಸ್ಪತ್ರೆಗಳಿವೆ. ಆದರೂ ಕೂಡ ಇಲ್ಲಿ ಸಿಬ್ಬಂದಿಗಳ ತೀವ್ರ ಕೊರತೆ ಇದೆ. ಮಾನ್ಯ ಸಚಿವರ ಗಮನಕ್ಕೆ ಈ ವಿಷಯವನ್ನು ಮೊದಲು ತಂದಿದ್ದೇನೆ. ಆದ್ದರಿಂದ, ಕೊರತೆ ಇರುವ ಸಿಬ್ಬಂದಿಗಳನ್ನು ಯಾವಾಗ ಭರ್ತಿ ಮಾಡುತ್ತೀರಿ? ಮತ್ತೆ ಇಲ್ಲಿರುವ ಆಸ್ಪತ್ರೆಗಳನ್ನು ಮೇಲ್ದರ್ಜೆಗೇರಿಸ ಬೇಕೆಂದು ಕಳೆದ ಎರಡು ವರ್ಷಗಳಿಂದಲೂ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಕೊಡುತ್ತಾ ಬರುತ್ತಿದ್ದೇನೆ. ನಮ್ಮಲ್ಲಿ ಬನಹಟ್ಟಿ ಮತ್ತು ರಬಕವಿ ನಗರ ಸಭೆ ಇದೆ. ಇದು ಸುಮಾರು ಒಂದು ಲಕ್ಷ ಜನಸಂಖ್ಯೆ ಹೊಂದಿರತಕ್ಕಂಥ ನಗರವಾಗಿದೆ. ಆದರೆ, ಇಲ್ಲಿ ಕೇವಲ 30 ಹಾಸಿಗೆ ಹೊಂದಿರತಕ್ಕಂಥ ಒಂದು ಆಸ್ಪತ್ರೆ ಇದೆ. ಈ ಆಸ್ಪತ್ರೆಯನ್ನು ಮೇಲ್ದರ್ಜೆಗೇರಿಸಿ 100 ಹಾಸಿಗೆಯ ವ್ಯವಸ್ಥೆ ಮಾಡಬೇಕೆಂದು ಈಗಾಗಲೇ ಪ್ರಸ್ತಾವನೆಯನ್ನು ಕೊಟ್ಟಿದ್ದೇನೆ. ಆದ್ದರಿಂದ ಸದರಿ ಆಸ್ಪತ್ರೆಯನ್ನು ಯಾವಾಗ ಮೇಲ್ದರ್ಜೆಗೇರಿಸಲಾಗುತ್ತದೆ ಹಾಗೆಯೇ, ತೇರದಾಳ್ ಪುರಸಭೆ ವ್ಯಾಪ್ತಿಯಲ್ಲಿ ಕೇವಲ ಪ್ರಾಥಮಿಕ ಚಿಕಿತ್ಸಾ ಕೇಂದ್ರವಿದೆ. ಈ ಆಸ್ಪತ್ರೆಯನ್ನು ಸಹ ಮೇಲ್ದರ್ಜೆಗೇರಿಸಿ 30 ಹಾಸಿಗೆಯ ವ್ಯವಸ್ಥೆಯನ್ನು ಮಾಡಿಕೊಡಬೇಕೆಂಬ ಬೇಡಿಕೆಯನ್ನು ನಾನು ಈಗಾಗಲೇ ಇಟ್ಟಿದ್ದೇನೆ.

ಆದ್ದರಿಂದ ಈ ಎಲ್ಲಾ ಆಸ್ಪತ್ರೆಗಳನ್ನು ಯಾವಾಗ ಮೇಲ್ದರ್ಜೆಗೇರಿಸ ಲಾಗುತ್ತದೆ ಎನ್ನುತಕ್ಕಂಥ ವಿಷಯವನ್ನು ಮಾನ್ಯ ಸಚಿವರು ಹೇಳಬೇಕೆಂದು ಕೇಳುತ್ತೇನೆ. ಹಾಗೆಯೇ ಕೊರತೆ ಇರುವ ಸಿಬ್ಬಂದಿಗಳನ್ನು ಯಾವಾಗ ಒದಗಿಸಿ ಕೊಡುತ್ತೀರಿ?

ಶ್ರೀ ಆರ್.ಅಶೋಕ್: ಮಾನ್ಯ ಅಧ್ಯಕ್ಷರೆ, ನಾನು ಪ್ರಶ್ನೆಗೆ ಕೊಡುವಂತಹ ಸಂದರ್ಭದಲ್ಲಿಯೇ ಸುಮಾರು 500 ಜನ ಡಾಕ್ಟರ್‌ಗಳನ್ನು ನೇಮಕಾತಿ ಮಾಡಿಕೊಳ್ಳುತ್ತೇವೆಂದು ಹೇಳಿದ್ದೇನೆ. ಅದರ ಜೊತೆಗೆ ಹೊಸದಾಗಿ 63 ತಾಲ್ಲೂಕು ಆಸ್ಪತ್ರೆಗಳನ್ನು ಅಪ್‌ಗ್ರೇಡ್ ಮಾಡತಕ್ಕಂಥ ಕೆಲಸವನ್ನೂ ಕೂಡ ಮಾಡುತ್ತಿದ್ದೇವೆ. ಮುಂದಿನ ದಿನಗಳಲ್ಲಿ ಒಟ್ಟು 6 ಸಾವಿರಕ್ಕೂ ಮೇಲ್ಪಟ್ಟು ಹುದ್ದೆಗಳಿಗೆ ನೇಮಕಾತಿ ಮಾಡಿಕೊಳ್ಳುವುದಕ್ಕೆ ವಿಶೇಷ ಸಮಿತಿ ನಮಗೆ ಅನುಮತಿಯನ್ನೂ ಸಹ ಕೊಟ್ಟಿದೆ. ಡಾಕ್ಟರ್‌ಗಳ ಸಮಸ್ಯೆ ಇವತ್ತು ಬಂದಿರತಕ್ಕಂಥ ಸಮಸ್ಯೆಯಲ್ಲ. ಹಲವಾರು ವರ್ಷಗಳಿಂದ ನೇಮಕಾತಿ ನಿಂತು ಹೋಗಿದ್ದರಿಂದ ಮತ್ತು ಸರಿಯಾದ ಸಮಯಕ್ಕೆ ನೇಮಕಾತಿ ಮಾಡದೇ ಇರುವುದರಿಂದ ಈ ಸಮಸ್ಯೆ ಉಂಟಾಗಿದೆ. ಆದರೆ, ಈ ಸರ್ಕಾರ ಬಂದ ಮೇಲೆ ನೇಮಕಾತಿಗೆ ವಿಶೇಷ ಆದ್ಯತೆಯನ್ನು ಆರೋಗ್ಯ ಇಲಾಖೆಯಲ್ಲಿ ನಾವು ಕೊಡುತ್ತಿದ್ದೇವೆ. 500 ಡಾಕ್ಟರ್ ಜೊತೆಗೆ ಮತ್ತೆ 6800 ಅದಕ್ಕಿಂತ ಹೆಚ್ಚು ವೈದ್ಯಕೀಯ ಸಿಬ್ಬಂದಿಗಳ ಹುದ್ದೆಗಳಿಗೆ ನೇಮಕಾತಿ ಮಾಡುವುದಕ್ಕೆ ವಿಶೇಷ ಅನುಮತಿಯನ್ನು ನಾವು ಪಡೆದುಕೊಂಡಿದ್ದೇವೆ. ಆದ್ದರಿಂದ ಈಗ ಡಾಕ್ಟರ್‌ಗಳ ನೇಮಕಾತಿಯಾದ ಮೇಲೆ ಕೊರತೆ ಇರುವ ಕಡೆ ತುಂಬುವುದಕ್ಕೆ ಸರಿಯಾದ ವ್ಯವಸ್ಥೆಯನ್ನು ಮಾಡುತ್ತೇವೆ. ಹಾಗೆಯೇ, ತಾಲ್ಲೂಕು ಆಸ್ಪತ್ರೆಗಳನ್ನು ಅಪ್‌ಗ್ರೇಡ್ ಮಾಡುವುದರ ಜೊತೆಗೆ ಅದಕ್ಕೆ ಬೇಕಾಗಿರತಕ್ಕಂಥ ಕಟ್ಟಡದ ವ್ಯವಸ್ಥೆಯನ್ನು ಸಹ ಮಾಡುತ್ತಿದ್ದೇವೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಮತ್ತೆ PHC ಗಳನ್ನು ಅಪ್‌ಗ್ರೇಡ್ ಮಾಡಬೇಕೆಂದು ತಾವು ಕೇಳಿದ್ದೀರಿ. ಅಲ್ಲಿನ ಜನ ಸಂಖ್ಯೆಯ ಆಧಾರದ ಮೇಲೆ ಪರಿಶೀಲಿಸಿ ಇದನ್ನು ಮಾಡಬೇಕಾಗುತ್ತದೆ. ಆದ್ದರಿಂದ ಇದನ್ನೂ ಕೂಡ ಮಾಡುವ ವ್ಯವಸ್ಥೆಯನ್ನು ಮಾಡುತ್ತೇವೆ.

ಶ್ರೀ ಸಿದ್ದು ಸಾವದಿ: ಮಾನ್ಯ ಅಧ್ಯಕ್ಷರೆ, ಪ್ರಾಥಮಿಕ ಚಿಕಿತ್ಸಾ ಕೇಂದ್ರಗಳಲ್ಲಿಯೇ ಸಿಬ್ಬಂದಿ ವರ್ಗ ಇರಬೇಕೆಂದು ಸರ್ಕಾರದ ನಿಯಮಾವಳಿ ಇದ್ದರೂ ಸಹ ಇವತ್ತಿನ ದಿವಸ ವಿಹೆಚ್‌ಸಿಯಲ್ಲಿ ಯಾರೂ ಸಿಬ್ಬಂದಿ ಕೂಡ ಇರ್ತುತ್ತಿಲ್ಲ. ಇಂಥ ಸಂದರ್ಭದಲ್ಲಿ ಡಿಲಿವರಿ ಪೇಷೆಂಟ್ ಬಂದರೆ ಏನು ಮಾಡಬೇಕು? ಹಳ್ಳಿಗಳಲ್ಲಿ ಇವರ ಅವಶ್ಯಕತೆ ಇಲ್ಲವಾದರೆ, ಇವರನ್ನು

ಪಟ್ಟಣಗಳಿಗೆ ವಾಪಸ್ಸು ಕರೆಸಿಕೊಳ್ಳಿ. ಅವರು ಮನೆಯಲ್ಲಿರುತ್ತಾರೆಂದು ಅವರ ಮನೆ ಬಾಗಿಲಿಗೆ ಹೋದರೂ ಕೂಡ ಅಲ್ಲಿ ಯಾರು ಇರುವುದಿಲ್ಲ. ಇದರ ಬಗ್ಗೆ ಕೂಡ ನಾನು ಮೇಲಧಿಕಾರಿಗಳ ಗಮನಕ್ಕೆ ತಂದರೂ ಇದುವರೆಗೂ ಏನು ಕ್ರಮ ತೆಗೆದುಕೊಂಡಿಲ್ಲ. ಅಲ್ಲಿರತಕ್ಕಂಥ ANMಗಳು ಹಳ್ಳಿಯಲ್ಲಿಯೇ ವಾಸ ಮಾಡುವಂಥ ವ್ಯವಸ್ಥೆ ಮಾಡಬೇಕಾಗುತ್ತದೆ. ಈ ವಿಷಯಕ್ಕೆ ತಮ್ಮಿಂದ ಸ್ಪಷ್ಟವಾದ ಉತ್ತರವನ್ನು ಬಯಸುತ್ತೇನೆ.

ಶ್ರೀ ಆರ್.ಅಶೋಕ್: ವಿಶ್ವ ಬ್ಯಾಂಕ್ ಯೋಜನೆಯಡಿಯಲ್ಲಿ T.H.C. ಆಥವಾ ಸಮುದಾಯ ಆರೋಗ್ಯ ಕೇಂದ್ರವಿರುವ ಕಡೆ ಡಾಕ್ಟರ್ ಮತ್ತು ಪ್ಯಾರಾ ಮೆಡಿಕಲ್ ಸ್ಟಾಫ್ ವಾಸ ಮಾಡುವುದಕ್ಕೆ ವಸತಿಗಳನ್ನು ನಿರ್ಮಾಣ ಮಾಡಬೇಕೆಂದು ನಾವು ಈಗಾಗಲೇ ತೀರ್ಮಾನ ಮಾಡಿದ್ದೇವೆ. ಮತ್ತೆ ಎಲ್ಲಿ ಆರೋಗ್ಯ ಕೇಂದ್ರಗಳಿವೆಯೋ ಅಲ್ಲಿಯೇ ವಾಸ ಮಾಡಬೇಕೆಂಬ ಆದೇಶವನ್ನು ನಾನು ಈಗಾಗಲೇ ಮಾಡಿದ್ದೇನೆ. ಆದರೆ, ಕಟ್ಟಡದ ಕೊರತೆ ಇರತಕ್ಕಂಥದು ನಮ್ಮ ಗಮನಕ್ಕೆ ಬಂದಿದೆ. ಕಟ್ಟಡ ನಿರ್ಮಾಣ ಮಾಡುವುದಕ್ಕೆ ನಾವು ಆದ್ಯತೆಯನ್ನು ಈ ವರ್ಷದಲ್ಲಿ ಕೊಡುತ್ತೇವೆ.

ಅಧ್ಯಕ್ಷರು: ಮಾನ್ಯ ಶಂಕರಲಿಂಗೇಗೌಡರೆ, ದಯಮಾಡಿ ಕೇಳಿ, ನಿಮ್ಮ ಪ್ರಶ್ನೆಗೆ ಅವರು 15 ದಿನಗಳ ಕಾಲಾವಕಾಶವನ್ನು ಕೇಳಿದ್ದಾರೆ.

ಶ್ರೀ ಹೆಚ್.ಎಸ್.ಶಂಕರಲಿಂಗೇಗೌಡ: ಇಂತಹ ಪ್ರಶ್ನೆಗೆ ಉತ್ತರವನ್ನು ಕೊಡುವುದಕ್ಕೆ ಸಮರ್ಥರಾಗದೆ ಹೋದಮೇಲೆ ಇಂತಹ ಅಧಿಕಾರಿಗಳು ಏಕೆ ಬೇಕು? ಆ ಕಡೆ ಕಿತ್ತು ಹಾಕಿ .

ಅಧ್ಯಕ್ಷರು: ಆಯಿತು.

ಶ್ರೀ ಹೆಚ್.ಎಸ್.ಶಂಕರಲಿಂಗೇಗೌಡ: ಇದು ಒಳ್ಳೆಯ ವಿಷಯ, ಪತಿಕೆಯಲ್ಲಿ ಬರೆದಿದ್ದಾರೆ ನೋಡಿ. "ಹಾಸ್ಟೆಲ್‌ಗಳೆಂಬ ನಿತ್ಯ ನರಕ" ಚೆನ್ನಾಗಿ ಬರೆದಿದ್ದಾರೆ. ಅದನ್ನು ತರಿಸಿ ಓದಿ. ವಿಜಯ ಕರ್ನಾಟಕದವರು ನಿಜವಾಗಿಯೂ ಕೂಡ ವಿಧಿವತ್ತಾಗಿ ಪ್ರಾಮಾಣಿಕವಾಗಿ ಈ ಹಾಸ್ಟೆಲ್‌ಗಳ ದುರ್ನಾತದ ಬಗ್ಗೆ ಅಲ್ಲಿರತಕ್ಕಂಥ ನತದೃಷ್ಟ ವಿದ್ಯಾರ್ಥಿಗಳ ಬಗ್ಗೆ ಎಲ್ಲವನ್ನು ಬರೆದಿರುತ್ತಾರೆ.

ಅಧ್ಯಕ್ಷರು: ಆಯಿತು, ಅವರು 15 ದಿವಸ ಕಾಲಾವಕಾಶವನ್ನು ಕೇಳಿದ್ದಾರೆ.

ಶ್ರೀ ಎಚ್.ಎಸ್.ಶಂಕರಲಿಂಗೇಗೌಡ: ಅಧಿಕಾರಿಗಳನ್ನು ಮನೆಗೆ ಹೋಗಿ ಎಂದು ಹೇಳಿ, ಕತ್ತೆ ಮೇಯಿಸಲಿ.

ಅಧ್ಯಕ್ಷರು: ಈ ಸದನ ಮುಗಿಯುವುದರೊಳಗಡೆ ಆನ್ಸರ್ ಕೊಡಿಸುತ್ತೇನೆ.

ಶ್ರೀ ಹೆಚ್.ಎಸ್ ಶಂಕರಲಿಂಗೇಗೌಡ: ಅಲ್ಲಾ ಸರ್, ಇದು ಬಹು ಮುಖ್ಯವಾದ ಕೆಲಸ ಹಾಸ್ಟೆಲ್‌ನಲ್ಲಿರತಕ್ಕಂಥವರು ಬಡ ಜನರು, ಹಿಂದುಳಿದ ವರ್ಗದವರು, ಅಲ್ಪಸಂಖ್ಯಾತರ ವಿದ್ಯಾರ್ಥಿಗಳು, ಅವರಿಗೆ ಊಟ ಕೊಡುವುದರ ಬದಲಿ ಲದ್ದಿಯನ್ನು ಕೊಡುತ್ತಿದ್ದಾರಲ್ಲಾ ಅದರ ಬಗ್ಗೆ ಬರೆದಿದ್ದಾರೆ.

ಅಧ್ಯಕ್ಷರು: ಆಯಿತು.

ಸರ್ಕಾರಿ ಕೈಗಾರಿಕಾ ತರಬೇತಿ ಕೇಂದ್ರವನ್ನು ಸ್ಥಾಪಿಸುವುದು

41 (194) ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಔರಾದ್): ಮಾನ್ಯ ಕಾರ್ಮಿಕ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗೆ ಉತ್ತರಿಸುವರೆ ?

ಅ) ಪ್ರಸಕ್ತ ಸಾಲಿನಲ್ಲಿ ರಾಜ್ಯದ ಯಾವ ಯಾವ ಪ್ರದೇಶದಲ್ಲಿ ಹೊಸದಾಗಿ ಸರ್ಕಾರಿ ಕೈಗಾರಿಕಾ ತರಬೇತಿ ಕೇಂದ್ರಗಳನ್ನು ಸ್ಥಾಪಿಸಲು ಒಪ್ಪಿಗೆ ನೀಡಲಾಗಿದೆ;

ಆ) ಬೀದರ್ ಜಿಲ್ಲೆಯ ಔರಾದ್‌ನಲ್ಲಿ ಐಟಿಐಯನ್ನು ಪ್ರಾರಂಭಿಸುವ ಬಗ್ಗೆ ಇದುವರೆವಿಗೆ ನಡೆದಿರುವ ಪತ್ರ ವ್ಯವಹಾರಗಳ ಮತ್ತು ಸರ್ಕಾರದ ಪ್ರಸ್ತಾವನೆಗಳ ವಿವರಗಳೇನು ;

ಇ) ಔರಾದ್‌ನಲ್ಲಿ ಐಟಿಐಯನ್ನು ಪ್ರಾರಂಭಿಸಲು ಪ್ರಕ್ರಿಯೆಗಳು ಮುಗಿದಿದ್ದರೂ ಕೂಡ ಔರಾದ್ ಅನ್ನು ಕಡೆಗಣಿಸಿ ಬೇರೆ ಪ್ರದೇಶಗಳೀಗೆ ಐಟಿಐ ಸ್ಥಾಪನೆಗೆ ಅನುಮತಿ ನೀಡಲು ಕಾರಣಗಳೇನು ;

ಈ) ಹಾಗಿದ್ದಲ್ಲಿ, ಔರಾದ್‌ನಲ್ಲಿ ಐಟಿಐ ಅನ್ನು ಪ್ರಾರಂಭಿಸಲು ಸರ್ಕಾರ ಕೂಡಲೇ ಆದೇಶವನ್ನು ಹೊರಡಿಸಲು ಕ್ರಮ ಕೈಗೊಳ್ಳುವುದೇ ;

ಉ) ಇಲ್ಲದಿದ್ದಲ್ಲಿ ಕಾರಣಗಳೇನು ?

ಶ್ರೀ ಇಕ್ಬಾಲ್ ಅನ್ಸಾರಿ (ಕಾರ್ಮಿಕ ಹಾಗೂ ಅಲ್ಪ ಸಂಖ್ಯಾತರ ಕಲ್ಯಾಣ ಸಚಿವರು)

ಅ) 1. ಆಲೂರು ಸಿದ್ದಾಪುರ, ಕೊಡಗು ಜಿಲ್ಲೆ
2. ಕೆ.ಆರ್. ಪೇಟೆ, ಮಂಡ್ಯ ಜಿಲ್ಲೆ
3. ರಾಮನಗರ, ಬೆಂಗಳೂರು ಗ್ರಾಮಾಂತರ ಜಿಲ್ಲೆ
4. ಪಡವಲಹಿಪ್ಪೆ, ಹೊಳೆನರಸೀಪುರ, ಹಾಸನ ಜಿಲ್ಲೆ